U/S
22/12/22

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 443
ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 22.12.2022
ಉತ್ತರಿಸುವ ಸಚಿವರು : ಮುಖ್ಯಮಂತ್ರಿ.

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಪ್ರಸಕ್ತ ಸಾಲಿನಲ್ಲಿ ಭತ್ತ ಮತ್ತು ರಾಗಿ ಖರೀದಿ ಮಾಡಲು ಅನುಸರಿಸಲಾಗುತ್ತಿರುವ ಮಾರ್ಗಸೂಚಿಗಳೇನು; (ಮಾಹಿತಿ ನೀಡುವುದು)</td><td>2022-23 ನೇ ಸಾಲಿನಲ್ಲಿ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಭತ್ತ, ರಾಗಿ ಮತ್ತು ಬಿಳಿಜೋಳಕ್ಕೆ ಕೇಂದ್ರ ಸರ್ಕಾರವು ಈ ಕೆಳಗಿನಂತೆ ದರವನ್ನು ನಿಗಧಿಪಡಿಸಿದ್ದು, 5.00 ಲಕ್ಷ ಮೆಟ್ರಿಕ್ ಟನ್ ಭತ್ತ, 5.00 ಲಕ್ಷ ಮೆಟ್ರಿಕ್ ಟನ್ ರಾಗಿ ಮತ್ತು 2.00 ಲಕ್ಷ ಮೆಟ್ರಿಕ್ ಟನ್ ಬಿಳಿಜೋಳವನ್ನು ಖರೀದಿಸಲು ಅನುಮತಿ ನೀಡಿದೆ.
<table>
<tr><th colspan="2">ಬೆಳೆ</th><th>ದರ ಪ್ರತಿ ಕ್ವಿಂಟಾಲ್</th></tr>
<tr><td>ಭತ್ತ</td><td>Common</td><td>2040</td></tr>
<tr><td></td><td>Grade A</td><td>2060</td></tr>
<tr><td>ಜೋಳ</td><td>Hybrid</td><td>2970</td></tr>
<tr><td></td><td>Maldandi</td><td>2990</td></tr>
<tr><td>ರಾಗಿ</td><td></td><td>3578</td></tr>
</table>
ಅದರಂತೆ ಭತ್ತ ಬೆಳೆಯುವ ಪ್ರತಿ ರೈತರಿಂದ ಪ್ರತಿ ಎಕರೆಗೆ 25 ಕ್ವಿಂಟಾಲ್ ಹಾಗೂ ಗರಿಷ್ಟ 40 ಕ್ವಿಂಟಾಲ್ ಭತ್ತವನ್ನು ಖರೀದಿಸಲಾಗುವುದು.<br>ರಾಗಿ/ಬಿಳಿಜೋಳವನ್ನು ಬೆಳೆಯುವ ಸಣ್ಣ ಮತ್ತು ಅತೀ ಸಣ್ಣ ರೈತರಿಂದ ಪ್ರತಿ ಎಕರೆಗೆ 10 ಕ್ವಿಂಟಾಲ್ ಸಂತೆ ಗರಿಷ್ಟ 20 ಕ್ವಿಂಟಾಲ್ ರಾಗಿ /ಬಿಳಿಜೋಳವನ್ನು ಖರೀದಿಸಲಾಗುತ್ತದೆ.<br><br>ಭತ್ತ, ರಾಗಿ ಮತ್ತು ಬಿಳಿಜೋಳವನ್ನು ಮಾರಾಟ ಮಾಡಲು ಇಚ್ಛಿಸುವ ರೈತರ ನೊಂದಣಿ ಕಾರ್ಯವನ್ನು ದಿನಾಂಕ:15.12.2022 ರಿಂದ ಪ್ರಾರಂಭಿಸಲಾಗುತ್ತಿದೆ. ಹಾಗೂ ಆಹಾರಧಾನ್ಯಗಳ ಖರೀದಿ ಅವಧಿಯನ್ನು ದಿನಾಂಕ:01.01.2023 ರಿಂದ 31.03.2023 ರವರೆಗೆ ನಿಗಧಿಪಡಿಸಲಾಗಿದೆ.</td></tr>
</table>

| | | |
|---|---|---|
| ಆ | ಭತ್ತ ಮತ್ತು ರಾಗಿ ಖರೀದಿ ಕೇಂದ್ರಗಳನ್ನು ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಹಾಸನ ಈ ಭಾಗದಲ್ಲಿ ತೆರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಆಹಾರಧಾನ್ಯಗಳ ಖರೀದಿಸಲು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಖರೀದಿ ಕೇಂದ್ರಗಳನ್ನು ತೆರೆದು ದಿನಾಂಕ:15.12.2022 ರಿಂದ ರೈತರ ನೊಂದಣಿ ಕಾರ್ಯವನ್ನು ಪ್ರಾರಂಭಿಸಲಾಗುತ್ತಿದ್ದು, ದಿನಾಂಕ:01.01.2023 ರಿಂದ 31.03.2023 ರವರೆಗೆ ಆಹಾರಧಾನ್ಯವನ್ನು ಖರೀದಿಸಲಾಗುತ್ತಿದೆ. |
| ಇ | ರಾಜ್ಯ ಸರ್ಕಾರ ಇದುವರೆವಿಗೂ ಭತ್ತ ಮತ್ತು ರಾಗಿ ಖರೀದಿ ಕೇಂದ್ರಗಳನ್ನು ಪ್ರಾರಂಭಿಸದಿರುವುದರಿಂದ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಆಹಾರಧಾನ್ಯಗಳ ಖರೀದಿಸಲು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಖರೀದಿ ಕೇಂದ್ರಗಳನ್ನು ತೆರೆದು ದಿನಾಂಕ:15.12.2022 ರಿಂದ ರೈತರ ನೊಂದಣಿ ಕಾರ್ಯವನ್ನು ಪ್ರಾರಂಭಿಸಲಾಗುತ್ತಿದ್ದು, ದಿನಾಂಕ:01.01.2023 ರಿಂದ 31.03.2023 ರವರೆಗೆ ಆಹಾರಧಾನ್ಯವನ್ನು ಖರೀದಿಸಲಾಗುತ್ತಿದೆ. |
| ಈ | ಬೆಂಬಲ ಘೋಷಣೆ ಮಾಡಿ, ಯಾವ ಕಾಲಮಿತಿಯಲ್ಲಿ ಖರೀದಿ ಕೇಂದ್ರಗಳನ್ನು ತೆರೆಯಲಾಗುವುದು? | ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಆಹಾರಧಾನ್ಯಗಳ ಖರೀದಿಸಲು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಖರೀದಿ ಕೇಂದ್ರಗಳನ್ನು ತೆರೆದು ದಿನಾಂಕ:15.12.2022 ರಿಂದ ರೈತರ ನೊಂದಣಿ ಕಾರ್ಯವನ್ನು ಪ್ರಾರಂಭಿಸಲಾಗುತ್ತಿದ್ದು, ದಿನಾಂಕ:01.01.2023 ರಿಂದ 31.03.2023 ರವರೆಗೆ ಆಹಾರಧಾನ್ಯವನ್ನು ಖರೀದಿಸಲಾಗುತ್ತಿದೆ. |

**ಆನಾಸ 187 ಆರ್‌ಪಿಆರ್ 2022 (ಇ-ಆಫೀಸ್)**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ